

ಐತಿಹಾಸಿಕ ಹೇಮರಡ್ಡಿ ಮಲ್ಲಮ್ಮನ ಅನಂದ ಭಾಷ್ಪಗಳು ತೊಟ್ಟಿಕ್ಕುತ್ತಿದ್ದವು. ಈಗಲೂ ಆ ನೀರು ಬೇಸಿಗೆ, ಮಳೆಗಾಲವೆನ್ನದೆ ಅದೆಷ್ಟೋ ವರ್ಷಗಳಿಂದಲೂ ತೊಟ್ಟಿಕ್ಕುತ್ತಲೇ ಇದೆ. ಅದು ಈಗ ದೇವಾಲಯದ ಗರ್ಭಗುಡಿಯಲ್ಲಿದ್ದು, ಅದರ ಪಕ್ಕವೇ ಹೇಮರಡ್ಡಿ ಮಲ್ಲಮ್ಮ ಪ್ರತಿಮೆ ಇದೆ.

ಹೇಮರಡ್ಡಿ ಮಲ್ಲಮ್ಮ ಬಗ್ಗೆ ಪೌರಾಣಿಕ ಕಥೆಗಳೂ ಇವೆ. ಅವಳ ಪ್ರಾರ್ಥನೆಗೆ ಮಣಿದು ಶ್ರೀಶೈಲ ಮಲ್ಲಿಕಾರ್ಜುನ ಪ್ರತ್ಯಕ್ಷನಾದಾಗ ಮಲ್ಲಮ್ಮನ ಕಣ್ಣಿನಿಂದ ಆನಂದ ಭಾಷ್ಪಗಳು ಉದುರಿದವಂತೆ. ಆ ಸ್ಥಳದಲ್ಲಿ ಇಂದೂ ಆನಂದ ಭಾಷ್ಪದ ನೀರು ಜಿನುಗುತ್ತಲೇ ಇದೆ ಎನ್ನುವುದು ಭಕ್ತರ ನಂಬಿಕೆ.

ದೇವಾಲಯಕ್ಕೆ ಭೇಟಿ ನೀಡುತ್ತಲೇ ಮಲ್ಲಮ್ಮನ ಈ ಪವಾಡ ಕಥೆಗಳನ್ನು ಮತ್ತು ವೀರಶೈವ ರಡ್ಡಿ ಜನಾಂಗದ ಇತಿಹಾಸವನ್ನು ಇಲ್ಲಿನ ಗುರುಪಾದಯ್ಯಸ್ವಾಮಿ ಭಕ್ತರಿಗೆ ವಿವರಿಸುತ್ತಾರೆ.

## ಹಸಿರು ಕಾನನದ ನಡುವೆ

ವಿಶಾಲ ನಲ್ಲಮಲ್ಲ ಅರಣ್ಯ ಶ್ರೇಣಿಯ ಹಸಿರು ಗಿರಿ ಕಂದರದ ನಡುವಣ ಶ್ರೀಶೈಲ ಪ್ರವಾಸ ಮುದ ನೀಡುತ್ತದೆ. ಸ್ವಂತ ವಾಹನಗಳಲ್ಲಿ ಮನೆ ಅಡುಗೆಯೊಂದಿಗೆ ಹೋದರೆ ಅರಣ್ಯದ ಮಧ್ಯೆ ಭಿನ್ನವಾಗಿ ಊಟ ಸವಿಯಬಹುದು. ಕೆಲವರು ವಾಹನದಲ್ಲಿ ಅಗತ್ಯ ಪದಾರ್ಥ ಮತ್ತು ಪರಿಕರಗಳೊಂದಿಗೆ



**ವಿಶಾಲ ನಲ್ಲಮಲ್ಲ ಅರಣ್ಯ ಶ್ರೇಣಿಯ ಹಸಿರು ಗಿರಿ ಕಂದರದ ನಡುವಣ ಶ್ರೀಶೈಲ ಪ್ರವಾಸ ಮುದ ನೀಡುತ್ತದೆ.**



ಬಂದು ಅರಣ್ಯದಲ್ಲೇ ಅಡುಗೆ ಮಾಡಿ ಊಟ ಮಾಡುತ್ತಾರೆ.

ಗಿರಿಯ ಮೇಲಿರುವ ಶ್ರೀಶೈಲದ ಇನ್ನೊಂದು ಬೆಟ್ಟದ ಮೇಲೆ ಮಲ್ಲಮ್ಮನ ದೇವಾಲಯವಿದೆ. ಅಲ್ಲಿಂದ ಇಡೀ ಶ್ರೀಶೈಲ ಸುಕ್ಷೇತ್ರ ಆಕರ್ಷಕ. ದಾರಿಯಲ್ಲಿ 12ನೇ ಶತಮಾನದ ವಿರಾಗಿನಿ, ಶಿವಶರಣೆ ಅಕ್ಕಮಹಾದೇವಿ ತಪಸ್ಸು ಮಾಡಿ ಮಲ್ಲಿಕಾರ್ಜುನನ್ನು ಒಲಿಸಿಕೊಂಡ ಕದಳಿವನದ ಬಾಳೆ ತೋಟಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಶ್ರೀಶೈಲ ಮಲ್ಲಿಕಾರ್ಜುನ, ಮಾತೆ ಭ್ರಮರಾಂಭ ದೇವಿ, ಬೃಹತ್ ಬಸವಣ್ಣನೊಂದಿಗೆ ಮಲ್ಲಿಕಾರ್ಜುನನ ಪರಮಭಕ್ತೆ ಹೇಮರಡ್ಡಿ ಮಲ್ಲಮ್ಮನ ದರ್ಶನ ಒಂದೆಡೆ ಪಡೆಯುವುದು ಈ ಪ್ರವಾಸದ ಲಾಭ.

ಆಂಧ್ರದ ಕರ್ನೂಲು ಜಿಲ್ಲೆಯಲ್ಲಿರುವ ಶ್ರೀಶೈಲಕ್ಕೆ ಕರ್ನಾಟಕದ ಎಲ್ಲ ಜಿಲ್ಲೆಗಳಿಂದ ಮಾತ್ರವಲ್ಲ ಕೇರಳ, ತಮಿಳುನಾಡುಗಳಿಂದಲೂ ನೇರ ಬಸ್ ಸೌಕರ್ಯವಿದೆ. ಶ್ರೀಶೈಲದಲ್ಲಿ ಪ್ರಸಾದ ನಿಲಯಗಳು, ವಸತಿಗೃಹ ಹಾಗೂ ಹೋಟೆಲ್‌ಗಳೂ ಸಾಕಷ್ಟಿವೆ.